ಪ್ರಥಮ ದರ್ಜೆಯ ಗುತ್ತಿಗೆದಾರರಾಗಿದ್ದರು. ನಮ್ಮೂರಿನ ರಸ್ತೆಗಳು, ಶಾಲೆಗಳು ಹಲವಾರು ಸರ್ಕಾರಿ ಕಟ್ಟಡಗಳನ್ನು ಗುತ್ತಿಗೆ ಪಡೆದು ನಿರ್ಮಿಸಿದ್ದರು. ಅವರನ್ನು ಕಂಡರೆ ನಮ್ಮ ಮನೆಯ ಆಳುಗಳು, ಕೂಲಿ ಕಾರ್ಮಿಕರು ಮತ್ತು ಸಾಮಾನ್ಯ ಜನರು ಹೆದರಿ ನಡುಗುತ್ತಿದ್ದರು. ಅವರೆದುರಿಗೆ ಕೃತಕ ಗೌರವ ತೋರಿಸುತ್ತಿದ್ದರು. ದೊಡ್ಡಪ್ಪ ಯಾವಾಗಲೂ ಅಂಬಾಸಿಡರ್ ಕಾರಿನಲ್ಲಿಯೇ ಓಡಾಡುತ್ತಿದ್ದರೂ ಸಂಜೆಯಾದ ನಂತರ ಬುಲೆಟ್ ಮೋಟಾರು ಬೈಕಿನಲ್ಲಿ ಹೊರಗೆ ಹೋಗುತ್ತಿದ್ದರು. ಅವರು ಬರುತ್ತಿದ್ದುದು ರಾತ್ರಿ ನಾವೆಲ್ಲಾ ಮಲಗಿದ ಮೇಲೆಯೇ. ನಮ್ಮ ದೊಡ್ಡಮ್ಮನೂ ಧಡೂತಿ ದೇಹದ ಕುಳ್ಳಗಿನ ಹೆಂಗಸು. ಹೆಚ್ಚು ಓಡಾಡಲು ಉಬ್ಬಸಪಡುತ್ತಿದ್ದರು.

ಹಾಗಾಗಿ ಮನೆಯ ಯಾವ ಕೆಲಸಗಳನ್ನೂ ಅವರಿಂದ ಮಾಡಲು ಆಗುತ್ತಿರಲಿಲ್ಲ. ದೊಡ್ಡಪ್ಪ ಬರುವುದರೊಳಗಾಗಿ ಅವರೂ ಅವರ ರೂಮಿನಲ್ಲಿ ಮಲಗಿ ಬಿಡುತ್ತಿದ್ದರು. ಅಜ್ಜಿ ಮತ್ತು ಅಮ್ಮ ಮಾತ್ರ ಹಾಲಿನಲ್ಲಿ ಟೀವಿ ನೋಡಿಕೊಂಡು ಕುಳಿತಿರುತ್ತಿದ್ದರು. ನಾನು ಅಜ್ಜಿಯ ತೊಡೆಯ ಮೇಲೆಯೇ ಮಲಗಿರುತ್ತಿದ್ದೆ. ದೊಡ್ಡಪ್ಪನ ಬುಲೆಟ್ ಮೋಟಾರು ಬೈಕಿನ ಸದ್ದಿನಿಂದ ಕೆಲವೊಮ್ಮೆ ನನಗೆ ಎಚ್ಚರಿಕೆಯಾಗುತ್ತಿತ್ತು. ಅಮ್ಮ ದೊಡ್ಡಪ್ಪನಿಗೆ ಊಟ ಬಡಿಸಿ ಅವರದ್ದು ಮುಗಿದ ಬಳಿಕ ಕೊನೆಯದಾಗಿ ತಾನೂ ಊಟ ಮಾಡಿ ನನ್ನನ್ನು ಎತ್ತಿಕೊಂಡು ನಮ್ಮ ರೂಮಿಗೆ ಬಂದು ಮಲಗುತ್ತಿದ್ದಳು. ಮನೆಯಲ್ಲಿ ಊಟ ತಿಂಡಿ ಮತ್ತು ಅಡುಗೆಯನ್ನು ಆಳು ಕಾಳು ಎಲ್ಲರಿಗೂ ರುಚಿಕರವಾಗಿ ಮಾಡಿ ಬಡಿಸುತ್ತಿದ್ದುದೇ ನನ್ನ ಅಮ್ಮ. ಅದರಿಂದಾಗಿಯೇ ಎಲ್ಲರಿಗೂ ಅವಳು ಅಚ್ಚುಮೆಚ್ಚು. ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು ಮತ್ತು ಇತರ ಮನೆಗೆಲಸಗಳಿಗಾಗಿ ಇಬ್ಬರು ಹೆಂಗಸರು ದಿನವೂ ಬಂದು ಹೋಗುತ್ತಿದ್ದರು. ಅದಲ್ಲದೇ ಟಿಪ್ಪರು, ಟ್ರಾಕ್ಟರುಗಳನ್ನು ಓಡಿಸಲು ಬೇರೆ ಬೇರೆಯ ಡ್ರೈವರುಗಳಿದ್ದರು. ನಮ್ಮ ಸಿಮೆಂಟು, ಹಾರ್ಡ್‌ವೇರ್ ಮತ್ತು ಪೈಂಟ್ ಅಂಗಡಿಯ ವಹಿವಾಟನ್ನು ನೋಡಿಕೊಳ್ಳಲು ಎಂಟು ಜನ ಕೆಲಸಗಾರರಿದ್ದರು. ಕಬ್ಬಿನ ಗದ್ದೆ ಮತ್ತು ತೆಂಗಿನ ತೋಟಗಳನ್ನು ನೋಡಿಕೊಳ್ಳಲು ಎರಡು ಕುಟುಂಬಗಳು ಜಮೀನಿನಲ್ಲಿಯೇ ವಾಸವಾಗಿದ್ದವು. ಅಂಬಾಸಿಡರ್ ಕಾರು ಚಾಲನೆಯ ಜೊತೆಗೆ ಮನೆಯ ಎಲ್ಲರ ಬಟ್ಟೆಗಳನ್ನು ತೆಗೆದುಕೊಂಡು ಹೋಗಿ ಇಸ್ತ್ರಿ ಮಾಡಿಸಿಕೊಂಡು ಬರುವುದು ಡ್ರೈವರ್ ಚಂದ್ರಣ್ಣನ ಕೆಲಸವಾಗಿತ್ತು.

ನಾನು ಪ್ರೀತಿಸಿದ ಹೇಮಾಳ ತಂದೆ ನಮ್ಮ ದೂರದ ಸಂಬಂಧಿಕರಾಗಿದ್ದರು. ಟೈಲರಿಂಗ್ ವೃತ್ತಿಯವರಾಗಿದ್ದರಿಂದ ನಮ್ಮ ಮನೆಯ ಸದಸ್ಯರ ಮತ್ತು ಆಳುಕಾಳುಗಳ ಎಲ್ಲಾ ಬಟ್ಟೆಗಳನ್ನು ಅವರು ಮನೆಗೆ ಬಂದು ಅಳತೆ ತೆಗೆದುಕೊಂಡು ಹೋಗಿ ಹೊಲಿದುಕೊಂಡು ಪುನಃ ಮನೆಗೇ ತಂದುಕೊಡುತ್ತಿದ್ದರು. ಅವರಿಗೆ ದೊಡ್ಡಪ್ಪನನ್ನು ಕಂಡರೆ ಎಂತಹುದೋ ಹೆದರಿಕೆ. ಅವರ ಬಳಿಯಲ್ಲಿ ಮಾತನಾಡುವಾಗ ತುಸು ತೊದಲುತ್ತಲೇ ಅತೀವ ವಿನಯದಿಂದ ಮಾತನಾಡುತ್ತಿದ್ದರು. ಆದರೆ ಅಮ್ಮನನ್ನು ಕಂಡರೆ ಎಂತಹುದೋ ಅಭಿಮಾನ, ಪ್ರೀತಿ ಮತ್ತು ಗೌರವ. ಅಕ್ಕಾ ಎಂದು ಬಾಯಿ ತುಂಬಾ ಕರೆದು ಮಾತನಾಡಿಸುತ್ತಿದ್ದರು. ಅಮ್ಮನೂ ಅವರನ್ನು ಅಷ್ಟೇ ಗೌರವದಿಂದ ಕಾಣುತ್ತಿದ್ದಳು. ನಾನು ಅವರನ್ನು ಮಾಮ ಎಂದು ಕರೆಯುತ್ತಿದ್ದೆ. ಹೇಮಾ ಅವರ ತಂದೆಯೊಂದಿಗೆ ಆಗಾಗ ನಮ್ಮ ಮನೆಗೆ ಬರುತ್ತಿದ್ದಳು. ಅವಳು ನಮ್ಮ ಮನೆಗೆ ಬಂದಾಗ ಅವರ ಅಮ್ಮ ಅವಳಿಗೆ ಗುಬ್ಬಿ ತೋಳಿನ ರವಿಕೆ ಮತ್ತು ಉದ್ದದ ಲಂಗ ಹಾಕಿ ತಲೆ ಬಾಚಿ ಎರಡು ಜಡೆ ಎಣೆದು ಲಕ್ಷಣವಾಗಿ ಕಾಣುವಂತೆ ಕಳುಹಿಸುತ್ತಿದ್ದರು. ಅವಳನ್ನು ಕಂಡಾಗಲೆಲ್ಲಾ ನನಗೆ ಯಾಕೋ ಏನೋ ಆ ವಯಸ್ಸಿನಲ್ಲಿಯೇ ಒಂದು ತರಹ ಖುಷಿಯಾಗುತಿತ್ತು. ಆಕೆಯೂ ಅಮ್ಮನಂತೆ ಸ್ಫುರದ್ರೂಪಿಯಾಗಿದ್ದಳು. ಅವರ ತಂದೆ ಒಳಗೆ ಎಲ್ಲರ ಅಳತೆ ತೆಗೆದುಕೊಳ್ಳುವಾಗ ನಾನು ಅವಳನ್ನು ಕೈಹಿಡಿದು ಹೊರಗೆ ಕರೆದುಕೊಂಡು ಬಂದು ಅವಳೊಂದಿಗೆ ಏನೇನೋ ಆಟವಾಡುತ್ತಿದ್ದೆ. ಅವಳು ಅವರ ತಂದೆಯೊಂದಿಗೆ ಹೊರಟಾಗ ಬೇಸರವಾಗುತಿತ್ತು. ಇನ್ನೊಂದು ಸ್ವಲ್ಪ ಹೊತ್ತು ಆಟವಾಡೋಣ ಎನ್ನುತ್ತಿದ್ದೆ. ಅವಳೂ ಕೂಡ ಅವರ ತಂದೆಗೆ ಇನ್ನೊಂದು ಸ್ವಲ್ಪ ಆಟವಾಡಿ ಬರುತ್ತೇನೆ ನೀನು ಹೋಗು ಎಂದರೂ ಅದೇನು ಹೆದರಿಕೆಯೋ ಅವರ ತಂದೆ ಬಿಡುತ್ತಿರಲಿಲ್ಲ. ಇನ್ನೊಂದು ಸರ್ತಿ ಬರೋಣ ಬಾ ಎಂದು ಪುಸಲಾಯಿಸಿ ಕರೆದುಕೊಂಡು ಹೋಗಿ ಬಿಡುತ್ತಿದ್ದರು. ಹೇಮಾಳ ಸಣ್ಣ ಹೆಂಚಿನ ಮನೆ ನಮ್ಮ ಮನೆಯಿಂದ ನಾಲ್ಕು ರಸ್ತೆಗಳ ಹಿಂದೆ ತುಸು ದೂರದಲ್ಲಿ ಇತ್ತು. ಅವರ ಮನೆಯ ಬಳಿ ಹೋಗಿ ಆಟವಾಡೋಣ ಎಂದರೆ ನನ್ನ ಅಜ್ಜಿ ಬಿಡುತ್ತಿರಲಿಲ್ಲ. ನೀನು ಹಾಗೆಲ್ಲಾ ಎಲ್ಲೂ ಹೋಗಬಾರದು, ಇಲ್ಲೇ ಆಟವಾಡು ಎಂದು ಮುದ್ದು ಮಾಡುತ್ತಿದ್ದರು.

ಬೆಂಗಳೂರಿನ ಚಾಮರಾಜಪೇಟೆ ನಮ್ಮ ಅಮ್ಮನ ತವರೂರು. ಅವರದ್ದು ದೊಡ್ಡ ಕುಟುಂಬ. ನಮ್ಮ ತಾತ ಬೆಂಗಳೂರು ನಗರದಲ್ಲಿ ಹೆಸರಾಂತ ವಕೀಲರಾಗಿದ್ದರು. ಅವರಿಗೆ ನಾಲ್ಕು ಜನ ಹೆಣ್ಣು, ಮೂವರು ಗಂಡು ಮಕ್ಕಳು. ಹೆಣ್ಣುಮಕ್ಕಳಲ್ಲಿ ಅಮ್ಮನೇ ಕೊನೆಯ ಮಗಳು. ನಮ್ಮ ಅಪ್ಪ ನಮ್ಮ ತಾತನವರ ಬಳಿ ವಕೀಲಿ ವೃತ್ತಿಯ ತರಬೇತಿ ಪಡೆಯುತಿದ್ದರಂತೆ. ಅಪ್ಪನ ಒಳ್ಳೆಯ ಗುಣವನ್ನು ಮೆಚ್ಚಿ ನಮ್ಮ ತಾತ ಅಮ್ಮನನ್ನು ಅಪ್ಪನಿಗೆ ಕೊಟ್ಟು ಮದುವೆ ಮಾಡಿದರಂತೆ. ಆಮೇಲೆ ಅಪ್ಪ ನಮ್ಮೂರಿನಲ್ಲಿಯೇ ವಕೀಲ ವೃತ್ತಿ ಪ್ರಾರಂಭಿಸಿದರಂತೆ. ನಮ್ಮ ಮಾಮ ಒಬ್ಬರು (ಅಮ್ಮನ ಕಿರಿಯ ತಮ್ಮ) ಅಮೆರಿಕದಲ್ಲಿ ಎಂಜಿಯರಾಗಿದ್ದಾರೆ. ಅವರಿಗೆ ನನ್ನನ್ನು ಕಂಡರೆ ತುಂಬಾ ಪ್ರೀತಿ. ಅವರು ಅಮೆರಿಕದಿಂದ ನನಗೊಂದು ಆಟದ ರೈಲು ತಂದುಕೊಟ್ಟಿದ್ದರು. ಅದನ್ನು ನಾನು ತುಂಬಾ ಜೋಪಾನವಾಗಿ ಇಟ್ಟುಕೊಂಡಿದ್ದೆ. ಯಾರಿಗೂ ಕೊಡುತ್ತಿರಲಿಲ್ಲ. ಅದರ ಸ್ವಿಚ್ ಒತ್ತಿದರೆ ನಿಜವಾದ ರೈಲಿನಂತೆ ಚುಕ್‌ಬುಕ್, ಚುಕ್‌ಬುಕ್, ಚುಕ್‌ಬುಕ್ ಎಂದು ಸದ್ದು ಮಾಡುತ್ತಾ ಮನೆಯ ತುಂಬಾ ಓಡಾಡುತಿತ್ತು. ಆ ರೈಲಿನ ಹಿಂಬದಿಯಲ್ಲಿ ಒಂದು ಬೋಗಿ. ಅದರಲ್ಲಿ ಕುಳಿತಿರುತಿದ್ದ ರೈಲ್ವೇ ಗಾರ್ಡ್ ಪ್ರತಿ ಸರ್ತಿ ರೈಲು ನಿಂತು ಮುಂದು ಹೋಗುವಾಗ ಎದ್ದು ಅದರಿಂದ ಬಗ್ಗಿ ಸುತ್ತಮುತ್ತ ನೋಡಿ ಹಸಿರು ನಿಶಾನೆಯನ್ನು ಬೀಸುತ್ತಿದ್ದ. ರೈಲು ಸೀಟಿ ಹೊಡೆಯುತ್ತಾ ಮುಂದೆ ಹೋಗುತ್ತಿತ್ತು. ಅದೇ ಆ ಆಟದ ರೈಲಿನ ಆಕರ್ಷಣೆ. ಯಾರೇ ಹುಡುಗರು ಬಂದರೂ ನಾನು ಆ ರೈಲನ್ನು ಚಾಲು ಮಾಡಿ ತೋರಿಸುತ್ತಿದ್ದೆ. ಅವರೆಲ್ಲಾ ತುಂಬಾ ಖುಷಿಗೊಳ್ಳುತ್ತಿದ್ದರು, ಪದೇ ಪದೇ ರೈಲನ್ನು ಓಡಿಸುವಂತೆ ಬೆರಗುಗಣ್ಣುಗಳಿಂದ ಒತ್ತಾಯಿಸುತ್ತಿದ್ದರು. ನನಗೆ ತುಂಬಾ ಹೆಮ್ಮೆಯಾಗುತಿತ್ತು. ಆ ರೈಲಿಗೆ ಬೆರಗಾದವರಲ್ಲಿ ಹೇಮಾ ಕೂಡ ಒಬ್ಬಳು. ಅವಳು ಮನೆಗೆ ಬಂದಾಗಲೆಲ್ಲಾ ನಾನು ಆ ರೈಲನ್ನು ಓಡಿಸಿ ಅವಳನ್ನು ಖುಷಿಪಡಿಸಿ ನಾನೂ ಖುಷಿಪಡುತ್ತಿದ್ದೆ. ಅವಳು ಎಷ್ಟು ಬಾರಿ ಕೇಳಿದರೂ ಬೇಸರ ಮಾಡಿಕೊಳ್ಳದೆ ಆಟದ ರೈಲನ್ನು ಓಡಾಡಿಸುತ್ತಿದ್ದೆ. ಆದರೆ ಅವಳು ಒಬ್ಬಂಟಿಯಾಗಿ ಎಂದೂ ನಮ್ಮ ಮನೆಗೆ ಬರುತ್ತಿರಲಿಲ್ಲ. ಅವರ ತಂದೆ ಬಂದಾಗ ಮಾತ್ರ ಅವರ ಜೊತೆಯಲ್ಲಿ ಬರುತ್ತಿದ್ದಳು. ಅವರ ತಂದೆ ತುಂಬಾ ಹೊತ್ತು ಅವಳನ್ನು ನಮ್ಮ ಮನೆಯಲ್ಲಿ ಇರಲು ಬಿಡುತ್ತಿರಲಿಲ್ಲ. ಅವರೊಂದಿಗೆ ಕರೆದುಕೊಂಡು ಹೊರಟು ಬಿಡುತ್ತಿದ್ದರು.

ಈ ಪ್ರೀತಿ ಹುಟ್ಟಲು ಕಾರಣಗಳೇ ಬೇಕಿಲ್ಲವೆಂದೇ ನನ್ನ ಅನಿಸಿಕೆ. ಆದರೆ ಕಂಡ ಎಲ್ಲಾ ಹುಡುಗಿಯರ ಮೇಲೆ ಪ್ರೀತಿ ಹುಟ್ಟಲಾರದು. ನಮ್ಮ ಸುತ್ತಮತ್ತಲ ಮನೆಗಳಲ್ಲಿಯೂ ಹೇಮಾಳ ವಯಸ್ಸಿನ ಮೂರ್ನಾಲ್ಕು ಹುಡುಗಿಯರಿದ್ದರು. ಆದರೆ ಯಾಕೋ ಏನೋ ಅವರೊಂದಿಗೆ ಮಾತನಾಡಲು, ಬೆರೆಯಲು ಅಷ್ಟೊಂದು ಇಷ್ಟವಾಗುತ್ತಿರಲಿಲ್ಲ. ಈ ಹೇಮಾ ಯಾಕೆ ಇಷ್ಟವಾದಳು? ಅವಳ ಅಂದವೇ? ಸರಳತನವೇ? ದೈಹಿಕ ಲಕ್ಷಣಗಳೇ? ಏನೆಂದು ನಾನು ನಿರ್ಧರಿಸಲಾರೆ. ಅಷ್ಟಕ್ಕೂ ಈ ಪ್ರೀತಿ ಎನ್ನುವುದು ಏನು? ಹೆಣ್ಣುಗಂಡಿನ ನಡುವಿನ ಆಕರ್ಷಣೆಯೇ? ಮನುಷ್ಯನ ಸುಪ್ತಮನಸ್ಸಿನಲ್ಲಿ ಅಡಗಿರುವ ಕಾಮವನ್ನು ತಣಿಸಿಕೊಳ್ಳುವ ಹಂಬಲದ ಪ್ರಾರಂಭವೇ? ಇರಲಾರದು. ಪ್ರೀತಿಸುವುದು ಎಂದರೆ ಸುಲಭವಾಗಿ ವಿವರಿಸಲಾಗದ ಒಂದು ಮಾನಸಿಕ ಸ್ಥಿತಿ. ಅನುಭವದ ಮೂಲಕ ಮಾತ್ರ ಅರ್ಥ ಮಾಡಿಕೊಳ್ಳುವಂತಹುದು. ಆದರೆ ಪ್ರೀತಿಸದವರಲ್ಲಿ ನಾವು ಇಷ್ಟಪಡುವ ಗುಣ ಮತ್ತು ಲಕ್ಷಣಗಳಿರುತ್ತವೆ ಎನ್ನುವುದೊಂದೇ ಸತ್ಯ.



ಈಶ್ವರ

## ಆಶಯ

ಹೌದು ನಿರ್ಮಾಣವಾಗಿದೆ
ಪೋಲಿಯೊರಹಿತ ಭಾರತ
ನಿರ್ಮಾಣವಾಗಬೇಕಿದೆ
ಪೋಲಿಗಳಿಲ್ಲದ ಭಾರತ!

★ ಶ್ರೀನಿವಾಸ ಕುಂಡಂತಾಯ